# ಹೂ ಪಾಠಗಳು

ಮೊಗ್ಗರಳಿ ಹೂವಾಗುವ ಅಮೃತಕ್ಷಣವನ್ನು ಕಣ್ಣು ತುಂಬಿಕೊಂಡಿದ್ದೀರಾ? ಚಿಂತೆಯಿಲ್ಲ. ತೊಟ್ಟಿಲ ಕಂದನ ಮೊಗವನ್ನು ನೋಡಿ: ಯಾವುದೋ ಮಾಯದ ಗಳಿಗೆಯಲ್ಲಿ, ನವಿಲುಗರಿಯೊಂದು ಸೋಕಿಹೋದಂತೆ ಮುಖದಲ್ಲಿ ಮಂದಹಾಸ ಮಿನುಗುತ್ತದೆ. ಮಗುವೇ ಒಂದು ಹೂವು. ಮಗು ಮೊಗ ಮತ್ತೊಂದು ಹೂವು. ಮೊಗದಲ್ಲಿನ ಮಂದಹಾಸ ಮಗದೊಂದು ಹೂವು. ಹೂಗಳ ಸಂಕಲನದ ಮಗುವಿನ ನಗೆಯೆಂದರೆ ಹೂವಿನಲ್ಲಿ ಹೂವರಳುವುದು!

ಹೂವರಳುವುದು ಸಾಮಾನ್ಯ ಸಂಗತಿಯಲ್ಲ. ಅದು, ಇಹದಲ್ಲಿ ಪರ ಮೂಡುವ ಬೆಡಗು. 'ಮಲ್ಲಿಗೆ'ಯ ಬಗ್ಗೆ ಕವಿ ಜಿ.ಎಸ್. ಶಿವರುದ್ರಪ್ಪನವರು ಬರೆಯುತ್ತ, 'ಸತ್ವಶೀಲನ ಧ್ಯಾನ ಮೌನವೆ, ಅರಳಿ ಬಂದೊಲು ತೋರಿದೆ!' ಎಂದು ಉದ್ಗರಿಸಿದ್ದಾರೆ. ಆಹಾ, ಕವಿ ಕಾಣ್ಕೆಯೇ! ಆ ಹೊಳಹನ್ನು ಹೀಗೂ ಹೇಳಬಹುದು: ಪ್ರತಿಯೊಂದು ಗಿಡವೂ ಸಂತನೇ. ಗಿಡದ ಸತ್ವ–ಸಾಧನೆಯ ಅಭಿವ್ಯಕ್ತಿ ಅರಳಿದ ಹೂ.

ಚೆಲುವು, ಘಮ ಹಾಗೂ ಬಣ್ಣದಿಂದಾಗಿ ಅರಳಿದ ಹೂ ಸಹೃದಯರನ್ನು ಮರುಳುಗೊಳಿಸುವುದು. ಹೂಗಳಿಗೆ ಮಾರುಹೋಗುವ ನಾವು, ಆ ಹೂವಿನ ತಾಯಿಯನ್ನು ಮರೆಯಬಾರದು. ಹೂಗಳಿಗೆ ಗಿಡ–ಮರಗಳು ತಾಯಿ; ಹೂಗಳಿಗೇನು, ನಮಗೂ ತಾಯಿಯೇ. ಅಮ್ಮನಂತೆಯೇ ಗಿಡಮರಗಳೂ ಅವ್ಯಾಜ ಪ್ರೇಮದಿಂದ ಹೂ ಅರಳಿಸುತ್ತವೆ. ಕೆಲವು ಹೂ ಪೀಚಾಗಿ, ಮಾಗಿ ಹಣ್ಣಾಗಿ, ಅನ್ನವಾಗಿ, ಹಣ್ಣಿಂದ ಬೇರ್ಪಟ್ಟ ಬೀಜ ಮತ್ತೊಂದು ಗಿಡದ ಬಿತ್ತವಾಗಿ ಮಣ್ಣಾಗುವುದು. ಹಣ್ಣಾಗುವ ಭಾಗ್ಯವಿಲ್ಲದ ಹೂಗಳ ಹೊಕ್ಕಳಲ್ಲೂ ಮಣ್ಣನ್ನು ಹಂಬಲಿಸುವ ಜೀವದಕಣ್ಣುಗಳಿರುವವು. ಹೀಗೆ, ಹೂಹಣ್ಣುಗಳ ಮೂಲಕ ಹಸುರು ಸಂತಾನಚಕ್ರ ಮುಂದುವರೆಯುವುದು.

ಹಸುರುಚಕ್ರದುರುಳು ಮರಗಿಡಗಳಿಗಷ್ಟೇ ಸಂಬಂಧಿಸಿದ್ದಲ್ಲ. ಆ ಚಕ್ರದ ಫಲಗಳನ್ನು ಮನುಷ್ಯರೂ, ಉಳಿದ ಜೀವಿಗಳೂ ಉಣ್ಣುವರು. ಮರಗಿಡಗಳಿಲ್ಲದೆ ಬದುಕುಂಟೆ? ಜಗವುಂಟೆ?

ಗಿಡವೊಂದರ ಬದುಕನ್ನು ಬೆರಗು ಅಥವಾ ರಸಾಸ್ವಾದದ ಕಣ್ಣಿನಿಂದ ನೋಡಿದರೆ ಸಾಲದು. ಆ ಬದುಕಿನಲ್ಲಿ ಪಾಠಗಳಿವೆ. ಅವುಗಳನ್ನು ಆಲಿಸಬೇಕು. ಗಿಡದ ಸತ್ವ ಹೂವಾಗಿ ಅರಳುವ ಸೋಜಿಗವಿದೆಯಲ್ಲ; ಅದು ನಮ್ಮ ಬದುಕೂ ಸಿದ್ಧಿಸಿಕೊಳ್ಳಬೇಕಾದ ಅಮೃತಫಲ. ಬಿಸಿಲಿಗೆ ತಮ್ಮನ್ನೊಡ್ಡಿಕೊಂಡು, ಆ ಕಾವನ್ನೇ ಜೀವದ್ರವ್ಯವಾಗಿಸಿಕೊಳ್ಳುವ ಗಿಡಮರಗಳು, ಜಗಕ್ಕೆ ನೆಳಲು ನೀಡುತ್ತವೆ. ಹೂ ಅರಳಿಸಿ, ನೋಡುಗರ ಕಣ್ಣು ತಣಿಸುತ್ತವೆ. ಹಣ್ಣುಗಳ ಮೂಲಕ ಅನ್ನವಾಗಿ ಪರಿಣಮಿಸುತ್ತವೆ. ಕೊರಡಾದ ನಂತರವೂ ಹಲವು ಬಗೆಯಲ್ಲಿ ಒದಗಿಬರುತ್ತವೆ. ಎಲ್ಲಕ್ಕೂ ಮಿಗಿಲಾಗಿ, ಇಂಗಾಲವನುಂಡು ಆಮ್ಲಜನಕವನು ನೀಡುತ್ತವೆ. ಆ ಜೀವಜನಕವೇ ನಮಗೆ ಉಸಿರು. ಆ ಕಾರಣದಿಂದಾಗಿ, ಪ್ರತಿಯೊಂದು ಗಿಡವೂ ನಮ್ಮ ಪಾಲಿಗೆ ಅಮ್ಮ. ಜೀವನಪೂರ್ತಿ ಉಸಿರೆರೆದು ಪೊರೆಯುವ ಅಮ್ಮ. ಇಂಥ ಗಿಡಮರಗಳಿಂದ ನಾವು ಕಲಿಯಬೇಕಾದುದು ಒಂದೆರಡಲ್ಲ.

ಹಸುರು ಸಂತಾನದಿಂದ ಮೊದಲಿಗೆ ಅರಿಯಬೇಕಾದುದು – ಸಂತನಾಗುವ ದಾರಿ, ಅಧ್ಯಾತ್ಮ ಸಾಧನೆಯ ಮಾರ್ಗ. ಲೌಕಿಕದ ವ್ಯಕ್ತಿ ಸ್ವಹಿತವನ್ನು ಚಿಂತಿಸಿದರೆ, ಸಂತನದು ಲೋಕಹಿತದ ಚಿಂತನೆ. ಬರಿ ಚಿಂತನೆಯಲ್ಲ, ಲೋಕದ ಹಿತಕ್ಕೆ ತನ್ನನ್ನು ತಾನು ಸಮರ್ಪಿಸಿಕೊಳ್ಳುವುದು ಸಂತತನದ ಮುಖ್ಯ ಲಕ್ಷಣ. ಅಧ್ಯಾತ್ಮ ಸಾಧನೆಗಾಗಿ ಕೆಲವರು ಎಲ್ಲಿಯೂ ನಿಲ್ಲದೆ ಅಲೆಮಾರಿಗಳಾಗುತ್ತಾರೆ. ಏಕಾಂತವನ್ನು ಬಯಸುತ್ತಾರೆ. ಗಿಡಮರಗಳೋ, ಜಂಗಮನಾಗದೆಯೂ ಸಂತಸಿದ್ಧಿ ತಮ್ಮದಾಗಿಸಿಕೊಳ್ಳುತ್ತವೆ.

ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಅವರದೊಂದು ಪದ್ಯವಿದೆ. 'ನಾನೊಂದು ಮರವಾಗಿದ್ದರೆ' ಶೀರ್ಷಿಕೆಯ ಆ ಪದ್ಯ, ಮರವೊಂದರ ಬದುಕಿನ ಘನತೆಯನ್ನು ಚಿತ್ರಿಸುತ್ತದೆ. 'ನಾನೊಂದು ಮರವಾಗಿದ್ದರೆ/ ಹಕ್ಕಿ ಗೂಡು ಕಟ್ಟುವ ಮುನ್ನ/ ಕೇಳುತ್ತಿರಲಿಲ್ಲ ನೀನು ಯಾವ ಕುಲ/ ಬಿಸಿಲು ನನ್ನ ಅಪ್ಪಿಕೊಂಡಾಗ ನೆರಳಿಗಾಗುತ್ತಿರಲಿಲ್ಲ ಮೈಲಿಗೆ;/ ತಂಬೆಲರ ಕೂಡ ಎಲೆಗಳ ಸ್ನೇಹ/ ಮಧುರವಾಗಿರುತ್ತಿತ್ತು' ಎಂದು ಆರಂಭಗೊಳ್ಳುವ ಈ ಕವಿತೆ, ನಾನೊಂದು ಮರವಾಗಿದ್ದರೆ, 'ಮಳೆ ಹನಿಗಳು ನಾನು ಶ್ವಪಚನೆಂದು ಹಿಂದೆ ಸರಿಯುತ್ತಿರಲಿಲ್ಲ' ಎಂದು ಸಮಾಜದ ಅನಾದಿ ಸಮಸ್ಯೆಯೊಂದರ ಬಗ್ಗೆ ನಮ್ಮ ಗಮನಸೆಳೆಯುತ್ತ, 'ಪವಿತ್ರ ಗೋವು ನನ್ನ ತೊಗಟೆಗೆ ತನ್ನ ಮೈ ಉಜ್ಜಿ/ ತುರಿಕೆ ತೀರಿಸಿಕೊಳ್ಳುವಾಗ ಅದರ ಅಂಗಾಂಗಳಲ್ಲಿ/ ಅಡರಿಕೊಂಡ ಮುಕ್ಕೋಟಿ ದೇವತೆಗಳು/ ನನ್ನನ್ನು ಮುಟ್ಟಿಸಿಕೊಳ್ಳುತ್ತಿದ್ದರು' ಎಂದು ವ್ಯಂಗ್ಯ–ವಿಷಾದದ ಧಾಟಿಯಲ್ಲಿ ಮುಂದುವರೆಯುತ್ತದೆ.

ಮೂಡ್ನಾಕೂಡು ಅವರ ಮರವಾಗುವ ಹಂಬಲದ ಕವಿತೆ, ಮರದ ಮಹತಿಯನ್ನು ಹೇಳುವುದರ ಜೊತೆಗೆ ನಮ್ಮ ಸಣ್ಣತನಗಳ ಕುರಿತೂ ಹೇಳುತ್ತಿದೆ. ಮರವಾಗುವ ಹಂಬಲ, ಸಮಾಜದ ಕೊಳಕು ತೊಳೆದುಹೋಗಬೇಕೆನ್ನುವ ಅಪೇಕ್ಷೆಯ ರೂಪವೂ ಆಗಿದೆ. ಆದರೆ, ಎಷ್ಟು ಜನ ಮರವಾಗಲು ಹಂಬಲಿಸುತ್ತಾರೆ. ಮಣ್ಣಿನಲ್ಲಿ ಹುಟ್ಟಿ, ಮಣ್ಣಿಗೇ ಅಂಟಿಕೊಂಡು, ಮಣ್ಣೇ ಆಗುವ ಮರದ ಬದುಕು ನಮಗೆ ಸುಲಭದ್ದಲ್ಲ. ಮರವಾಗುವುದಕ್ಕಿಂತಲೂ ಅಮರವಾಗುವ ಹುಚ್ಚು ನಮಗೆ. ಅಮರತ್ವದ ಭ್ರಮೆಯಲ್ಲಿ ಮರವಾಗುವ ಸಾಧ್ಯತೆಯಿಂದ ದೂರ ದೂರ ಸಾಗುತ್ತೇವೆ. ಕೊನೆಗೆ ಉಳಿಯುವುದೇನು? ಆಸೆಗಳ ದಾರಿಯಲ್ಲಿ ನಡೆದು ಮಸಣವನ್ನು ಎಡವಿದರೂ, ಕಣ್ಮುಚ್ಚುವವರೆಗೂ ಯಾವುದೋ ಆಸೆಯ ಚುಂಗು ಹಿಡಿದೇ ಇರುತ್ತೇವೆ. ಋತುವಿನ ಕರೆಗೆ ತಕ್ಕಂತೆ ಚಿಗುರು, ಹೂಹಣ್ಣುಗಳ ಧರಿಸುವುದು, 'ವರುಷಕೊಮ್ಮೆ ಹೊಸತು ಜನ್ಮ, ಹರುಷಕೊಂದು ಹೊಸತು ನೆಲೆಯು' (ಬೇಂದ್ರೆ) ದಕ್ಕದಿರುವುದಕ್ಕೆ ಈ ಆಸೆಗಳೇ ಕಾರಣ. ಆಸೆಗಳನ್ನು ಹಿಂಬಾಲಿಸುವುದನ್ನು ಬಿಟ್ಟು ಪ್ರಕೃತಿಯನ್ನು ಹಿಂಬಾಲಿಸತೊಡಗಿದರೆ, ನಾವೆಲ್ಲ ಮರಗಳೇ ಆಗಬಹುದು. ಮರವಾಗುವುದೆಂದರೆ ಹೂಹಣ್ಣು ಧರಿಸಿ ಸ್ಥಾವರ ಆಗುವುದೆಂದರ್ಥವಲ್ಲ; ಅ–ಮರತ್ವದ ಹುಚ್ಚು ಕಳೆದುಕೊಂಡು, ತಮ್ಮ ಬದುಕನ್ನು ಲೋಕಹಿತಕ್ಕಾಗಿ ರೂಪಿಸಿಕೊಳ್ಳುವುದು.

ನಾವು ಮರವಾಗುವುದು ಸಾಧ್ಯವಾದರೆ, ನಮ್ಮ ವ್ಯಕ್ತಿತ್ವ ಹೂವಾಗುವುದು! ಮರ–ನರ ಅಭಿನ್ನಚಿಂತನೆಯೇ ಈ ಲೋಕವನ್ನು ಉಳಿಸುವುದು.

■ **ಚಂಪಕಮಾಲಾ**

## ಮಾತೇ ಮುತ್ತು

- ಕೆಲಸವಿಲ್ಲದೆ ಕ್ಷಣ ಕಳೆದರೂ ಅದು ಕಳ್ಳತನ ಮಾಡಿದಂತೆ.

  –ಮಹಾತ್ಮ ಗಾಂಧಿ

- ಕೃತಿ ಕೆಟ್ಟದಿದ್ದು, ಮನಸ್ಸು ಸದಾ ಕೆಡುಕು ಬಯಸುತ್ತಿದ್ದು, ಸಜ್ಜನರಂತೆ ಮುಖವಾಡ ಧರಿಸುತ್ತಿರುವ ಜನರ ಬಗ್ಗೆ ಎಚ್ಚರದಿಂದ ಇರಬೇಕು.

  –ದ.ರಾ. ಬೇಂದ್ರೆ

- ಯಾವುದಿಹವೋ, ಬಂಧನವೋ, ಭ್ರಾಂತಿಯೋ ಅದಾಗಲಿ ನನ್ನ ನೆಲೆ, ಯಾವುದನುಭವದ ಸಹಜ ಕ್ರಾಂತಿಯೋ ಅದಾಗಲಿ ನನ್ನ ಕಲೆ.

  –ಕೆ.ಎಸ್. ನರಸಿಂಹ ಸ್ವಾಮಿ

- ನಂಬಿ ಅನುಭವಿಸುವುದಕ್ಕಿಂತ, ಅನುಭವಿಸಿ ನಂಬುವುದೇ ಶಾಶ್ವತ ಮತ್ತು ಸತ್ಯ.

  –ಕುವೆಂಪು

- ನಾನು ಮೊದಲು ಭಾರತೀಯನು, ಅನಂತರ ಕರ್ನಾಟಕದವನು ಎಂಬುದು ಸರಿಯಲ್ಲ. ಇವುಗಳಲ್ಲಿ ಮೊದಲು, ಹಿಂದುಗಡೆಗಳಿಲ್ಲ. ಎರಡು ಭಾವನೆಗಳು ಪರಸ್ಪರ ವಿರುದ್ಧಗಳಲ್ಲ. ವಿಶಿಷ್ಟತ್ವವು ಸಮಷ್ಟಿತ್ವವೂ ಏಕಸಮ ಯಾವ ಭೇದದಿಂದ ಬೇಕು.

  –ಆಲೂರು ವೆಂಕಟರಾಯರು

- ಒಳ್ಳೆಯ ಸ್ನೇಹಿತರು, ಒಳ್ಳೆಯ ಪುಸ್ತಕಗಳು ಮತ್ತು ನಿದ್ರೆಯ ಮನಸ್ಸಾಕ್ಷಿ: ಇದು ಆದರ್ಶ ಜೀವನ.

  –ಮಾರ್ಕ್ ಟ್ವೇನ್